ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ 19ನೇ ಮಾರ್ಚ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 11.00 ಗಂಟೆಗೆ ಸಮಾವೇಶಗೊಂಡಿತು.

ಸಭಾಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು

ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆಗೆ ಅನುಮತಿ ಕೋರಿ ಚರ್ಚೆ

ಎಸ್.ಆರ್.ಟಿ.ಸಿ ಬಸ್ ದರ ಏರಿಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇಗಲೇ ನಾವೆಲ್ಲಾ ವಿರೋಧ ಪಕ್ಷದವರು ಸೇರಿ ನಿಲುವಳಿ ಸೂಚನೆಯನ್ನು ಕೊಟ್ಟಿದೇವೆ. ಈ ವಳಿ ಸೂಚನೆ ಬಹಳ ಮಹತ್ವದ್ದು. ಅದಕ್ಕಾಗಿ ನಾವು ನಿನ್ನೆ ಕೂಡ ಬಡ್ಜೆಟ್‌ನಲ್ಲಿ ಪಾರ್ಟಿಸಿಪೇಟ್ ತುವಾಗ ಸ್ಪಷ್ಟವಾಗಿ ಹೇಳಿದೆವು. ಬಜೆಟ್‌ನಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕಾಗುವುದಿಲ್ಲ. ಈ ಬಜೆಟ್‌ಗಿಂತ ಮುಂದೆ ಕೆ.ಎಸ್.ಆರ್.ಟಿ.ಸಿ ದರವನ್ನು ಏರಿಸಿದ್ದೀರಿ, ಮತ್ತು ಹಾಲಿನ ದರವನ್ನು ಿದ್ದೀರಿ. ಹೀಗೆ ಅನೇಕ ರೀತಿಯಿಂದ ದರಗಳನ್ನು ಮೊದಲು ಏರಿಸಿ ಆಮೇಲೆ ಫಾರ್ಮಲಿ ಒಂದು ್ ಪ್ರಸೆಂಟ್ ಮಾಡುತ್ತಿದ್ದೀರಿ. ಅದಕ್ಕಾಗಿ ನಾವು ಪ್ರತಿಭಟಿಸುತ್ತೇವೆಂದು ನಿನ್ನೆ ಪ್ರತಿಭಟನೆ ಮಾಡಿ ಗೆ ಹೋದೆವು. ಅದಕ್ಕೆ ನಿನ್ನೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದೆ ಇರುವುದರಿಂದ ನಾವು ೀತಿಕವಾಗಿ ಹೊರಗಡೆ ಹೋದೆವು. ಅದಕ್ಕಾಗಿ ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಶ. ಎಲ್ಲಾ ವಿರೋಧ ಪಕ್ಷಗಳೂ ಒಗ್ಗಟ್ಟಾಗಿ ಈ ವಿಷಯದ ಮೇಲೆ ಚರ್ಚೆ ಮೊದಲು ನೋಟಿಸನ್ನು ್ದೇವೆ. ಅದಕ್ಕೆ ದಯವಿಟ್ಟು ಕ್ವೊಶ್ಚನ್ ಹವರ್ ಸಸ್ಪೆಂಡ್‌ಮಾಡಿ ತಾವು ಈ ನಿಲುವಳಿ ಯನ್ನು ತೆಗೆದುಕೊಂಡರೆ ಅದೇ ಉತ್ತಮವಾಗುತ್ತದೆ. ಸುಮಾರು ಎರಡು ಕೋಟಿ ಜನರಿಗೆ ಗಿ ಸಂಬಂಧಪಡುವಂಥದ್ದು. ಅದಕ್ಕಾಗಿ ಕ್ವೊಶನ್‌ಹವರ್‌ಸಸ್ಪೆಂಡ್ ಮಾಡಿ ನಿಲುವಳಿ ಯನ್ನು ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ು ಹೇಳಿದಂತೆ ನಾವು ಬಡ್ಜೆಟ್ಟನ್ನೂ ಸಹ ಬಹಿಷ್ಕರಿಸಿ ನಿಲುವಳಿ ಸೂಚನೆ ಮೂಲಕ ಇದರ ಬಗ್ಗೆ ಮಾಡಿ ಬಡ್ಜೆಟ್ಟ್‌ನ್ನು ಇಡುವಂಥ ಸ್ಯಾಂಕ್ಶಿಟಿಯನ್ನು ಕಳೆದುಕೊಂಡಿದ್ದೇವೆ. ನಿಮಗೆ ನಮ್ಮ ಬಗ್ಗೆ,

ಸದನದ ಬಗ್ಗೆ ವಿಶ್ವಾಸವಿಲ್ಲ, ಶಾಸಕರ ಬಗ್ಗೆ ವಿಶ್ವಾಸವಿಲ್ಲ, ರಾತ್ರೋ ರಾತ್ರಿ ಸಾರಿಗೆ ದರ ಏರಿಸಿರುವುದು ಅಕ್ಷಮ್ಯ ಅಪರಾಧ. ಹಾಗಾಗಿ ಇದರ ಬಗ್ಗೆ ನಿಲುವಳಿ ಸೂಚನೆಯ ಮೇರೆಗೆ ಚರ್ಚೆಯಾಗಬೇಕೆಂದು ನಮ್ಮಗಳ ಅಪೇಕ್ಷೆ ಇತ್ತು. ಆದರೆ ಸತ್ ಸಂಪ್ರದಾಯದ ಪ್ರಕಾರ ಬಡ್ಜೆಟ್ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಅದು ಪ್ರತಿಭಟನೆ ಮಾಡುವುದು, ನಾವು ಆ ಸಮಯದಲ್ಲಿ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದು ಈ ಮನೆಯಲ್ಲಿ ನಡೆದುಕೊಂಡು ಬಂದಿರುವ ಸತ್ ಸಂಪ್ರದಾಯ ಅಲ್ಲ ಎಂದು ಆ ಸತ್ ಸಂಪ್ರದಾಯ ಕಾಪಾಡುವುದಕ್ಕೋಸ್ಕರ ನಾವು ನೆನ್ನೆ ಸಹಕರಿಸಿದೆವು. ತಮ್ಮಲ್ಲಿ ವಿನಂತಿ ಮಾಡುವುದು, ಇದು ಬಹಳ ಮಹತ್ವದ್ದು. ಜನ ಆಕ್ರೋಶಗೊಂಡಿದ್ದಾರೆ ಬೇಸತ್ತಿದ್ದಾರೆ. ಶ್ರೀಸಾಮಾ ಹೇಗೆ ಬದುಕುವುದು ಎಂದು ಉಸಿರು ಕಟ್ಟುವಂತಹ ಒಂದು ಪರಿಸ್ಥಿತಿ ಇದೆ. ಈ ದರವನ್ನು ಅವ ಮನ ಬಂದಂತೆ ಏರಿಸಿದ್ದಾರೆ. ಅದಕ್ಕಾಗಿ ದಯಮಾಡಿ ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಕ್ವೊಶ್ಚನ್ ಹವರ್‌ಮುಂದೂಡಿ ಇದನ್ನು ಚರ್ಚೆ ಮಾಡಿದರೆ ಹೆಚ್ಚು ಮಹತ್ವ ಕೊಟ್ಟ ಹಾಗೆ ಆಗುತ್ತದೆ ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ ನಿನ್ನೆ ಆಯವ್ಯಯವನ್ನು ಮಂಡಿಸಿದಾಗ ಬಹುಶಃ ಪ್ರಪ್ರಥಮಬಾರಿಗೆ ನಾನು ಬಹಳ ತೀವ್ರವಾಗಿ ವಿರೋಧ ಮಾಡಿದ್ದೇನೆ. ಅದರ ವಿರೋಧದ ಹಿಂದೆ ಬಹಳ ಗಂಭೀರವಾದ ಶಕ್ತಿ ಇದೆ, ಮತ್ತು ಅರ್ಥ ಇದೆ. ಕರ್ನಾಟಕ ರಾಜ್ಯ ರ ಸಾರಿಗೆ ಸಂಸ್ಥೆಯವರು 130 ಕೋಟಿ ರೂ.ಗಳಿಗೂ ದರವನ್ನು ಜಾಸ್ತಿ ಮಾಡುವುದರ ಮೂಲಕ ಜನರ ಮೇಲೆ ಹೊರೆಯನ್ನು ಹೇರಿದ್ದಾರೆ. ಮತ್ತೊಂದು ಕಡೆ ವಿದ್ಯುಚ್ಛಕ್ತಿ ಮಂಡಳಿಯವರು 600 ಕೋಟಿ ರೂಪಾಯಿಗಳವರೆಗೆ ದರ ಏರಿಸಿದ್ದಾರೆ. ಹೆಚ್ಚು ಕಡಿಮೆ 700 ರಿಂದ 750 ಕೋಟಿ ರೂಪಾಯಿ ಈ ಆಯವ್ಯಯ ಮಂಡಿಸುವುದಕ್ಕೆ ಮುಂಚೆ ಒಂದು ರೀತಿ ದರವನ್ನು ಏರಿಸಿದ್ದೀರಿ. ಇಲ್ಲಿ ಆಯವ್ಯಯವನ್ನು ಮಂಡಿಸತಕ್ಕಂತಹ ನಾಟಕೀಯ ಏನು ನಡೆಯಿತು ಇದು ಒಳ್ಳೆಯದಲ್ಲ. ಇದು ಆರೋಗ್ಯಕರ ಅಲ್ಲ. ಇದು ರಾಜ್ಯದ ಜನತೆಗೆ ಬಹಳ ಮೋಸ ಮಾಡಿರುವಂಥದ್ದು ಎಂದು ನಿನ್ನೆ ಪ್ರತಿಭಟನೆ ಮಾಡಿದೆವು. ಇವತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಏರಿಸಿರತಕ್ಕಂತಹ ದರ ಏರಿಕೆ ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಎರಡು ಕೋಟಿ ಜನರ ಮೇಲೆ ಪರಿಣಾಮ ಬೀರತಕ್ಕಂಥದ್ದು ಜನತೆ ಇದರ ಮೌನ ಯಾತನೆಯನ್ನು ಪಡುತ್ತಿದ್ದಾರೆ. ಬೀದಿಗೆ ಲಕ್ಷಾಂತರ ಜನ ಬಾರದೇ ಇರಬಹುದು, ಸಾವಿರಾರು ಬಸ್‌ಗಳನ್ನು ಸುಡದೆ ಇರಬಹುದು. ಆದರೆ ಗಾಂಭೀರ್ಯವಾಗಿ, ಗೌರವವಾಗಿ ಪ್ರೀತಿಯಿಂದ ತಮ ನೋವನ್ನು ಅಳಲನ್ನು ಹೇಳಲಾರದೆ ನೋವು ಪಡುತ್ತಿದ್ದಾರೆ. ಆದ್ದರಿಂದ ಇದು ಬಹಳ ಮಹತ್ವವಾದದ್ದು. ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ದಯಮಾಡಿ ತಾವು ಪ್ರಶ್ನೋತ್ತರ ಕಾಲವನ್ನು ಬದಿಗೊತ್ತಿ, ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಮ್ಮ ತೀರ್ಪು ಯಾವುದೇ ಇರಲಿ ಅದಕ್ಕೆ ಬದ್ಧರಾಗಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಸಚಿವರು) : ಸನ್ಮಾ ಅಧ್ಯಕ್ಷರೆ, ಇಂಥ ವಿಷಯಗಳಲ್ಲಿ ಸರ್ಕಾರ ಚರ್ಚೆ ಮಾಡುವುದಕ್ಕೆ ಹಿಂದೆ ಮುಂದೆ ನೋಡುವುದಿ

ಇಂಥ ವಿಚಾರಗಳಲ್ಲಿ ಯಾವುದೇ ರೀತಿಯಲ್ಲಿ ಚರ್ಚೆಯಾದರೂ ಅದಕ್ಕೆ ಉತ್ತರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಅವರ ಮನವೊಲಿಸುವುದಕ್ಕೆ, ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಈಗ ಪ್ರಶ್ನೋತ್ತರ ವೇಳೆಯನ್ನು ತಾವು ತೆಗೆದುಕೊಂಡರೆ, ಇದಾದ ಮೇಲೆ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅಪ್ಪಣೆ ಮೇರೆಗೆ ಪ್ರಿಲಿಮಿನರಿ ಸಬ್ಮಿಶನ್ ಮಾಡುವುದಾದರೆ ಮಾಡಲಿ, ಏಕೆಂದರೆ ಪ್ರಶ್ನೋತ್ತರ ವೇಳೆ ಬಹಳ ಅಮೂಲ್ಯವಾಗಿರತಕ್ಕಂಥದ್ದು. ಅನೇಕರು ಪ್ರಶ್ನೆ ಕೇಳಿದ್ದಾರೆ, ಉತ್ತರಗಳೂ ಇವೆ. ಆದ್ದರಿಂದ ದಯವಿಟ್ಟು ಪ್ರಶ್ನೋತ್ತರ ವೇಳೆಯನ್ನು ತಡೆಹಿಡಿಯದೆ ನಂತರ ಅದಕ್ಕೆ ಸಹಕಾರ ಕೊಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿಷಯದ ಮಹತ್ವ ತಿಳಿದುಕೊಂಡು ನಾವು ಮಾಡುತ್ತಿದ್ದೇವೆಯೇ ಹೊರತು, ಅದನ್ನು ತರಾತುರಿಯಲ್ಲಿ ಬೇಕಾಗಿಯೇ ಮಾಡಬೇಕು ತಡೆ ಹಿಡಿಯಬೇಕೆಂದು ಅಲ್ಲ. ಏಕೆಂದರೆ ಇದರ ಇಂಪಾರ್ಟೆನ್ಸ್ ತಮಗೂ ಕೂಡ ಗೊತ್ತಿದೆ. ಸುಮಾರು ಎರಡು ಕೋಟಿ ಜನರು ದಿನವೂ ಓಡಾಡುತ್ತಾರೆ. 63,65, ರಿಂದ 70 ಲಕ್ಷ ಜನ ಅವರ ಬಸ್ಸಿನಲ್ಲಿ ಓಡಾಡುತ್ತಾರೆ.ಮತ್ತು ಉಳಿದಂಥ ನಮ್ಮ ಪ್ರೈವೇಟ್ ಬಸ್ಸು ಇವು ಎಲ್ಲವನ್ನೂ ತಾವು ಲೆಕ್ಕ ಹಾಕಿದಾಗ ಸುಮಾರು 50-60 ಲಕ್ಷ ಅಂದರೆ ಸುಮಾರು ಒಂದು ಕೋಟಿ ನಲವತ್ತು ಲಕ್ಷ ಜನರಿಗೆ ನೇರವಾಗಿ ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟ ವಿಷಯವಿದು. ಯಾವ ಮನುಷ್ಯ ದಿನಕ್ಕೆ ಮೂರು ರೂಪಾಯಿ ಖರ್ಚು ಮಾಡುತ್ತಿದ್ದನೋ ಅಥವಾ ಇವೊತ್ತು ಒಂಭತ್ತು ರೂಪಾಯಿ ಖರ್ಚು ಮಾಡುತ್ತಿದ್ದೇನೆ. ಎರಡು ರೂಪಾಯಿ ಕೊಡತ್ಕಕಂಥ ಹಳ್ಳಿಯ ಮನುಷ್ಯ ಇವೊತ್ತು ಮೂರರಿಂದ ಮೂರೂವರೆ ರೂಪಾಯಿ ಕೊಡುತ್ತಿದ್ದಾನೆ. ಅದಕ್ಕಾಗಿ ಇದು ಎಲ್ಲರಿಗೂ ಅನ್ವಯವಾಗುತ್ತದೆ. ಅದು ನಿಮ್ಮ ಕಡೆ ಇರತಕ್ಕಂಥವರಿಗೂ, ನಮ್ಮ ಕಡೆ ಇರತಕ್ಕಂಥವರಿಗೂ ಸಂಬಂಧಪಟ್ಟದ್ದಾಗಿದೆ. ಇದು ಯಾವ ಪಾರ್ಟಿಯ ಪ್ರಶ್ನೆ ಇಲ್ಲ, ಪಂಗಡದವರ ಪ್ರಶ್ನೆ ಇಲ್ಲ. ಅಥವಾ ಒಬ್ಬರಿಗೆ ಅನುಕೂಲವಾಗುತ್ತದೆ, ಇನ್ನೊಬ್ಬರಿಗೆ ಅನಾನುಕೂಲವಾಗುತ್ತದೆ ಎಂದು ಏನೂ ಇಲ್ಲ. ಅದರಲ್ಲಿ ನಮ್ಮ ಓಟರ್ಸ್ ಇದ್ದಾರೆ, ನಿಮ್ಮ ಓಟರ್ಸ್ ಇದ್ದಾರೆ, ವಿದ್ಯಾರ್ಥಿಗಳು ಇದ್ದಾರೆ, ಮಕ್ಕಳು ಇದ್ದಾರೆ, ಮುದುಕರೂ ಇದ್ದಾರೆ. ಆದ್ದರಿಂದ ಆ ಒಂದು ದೃಷ್ಟಿಯಿಂದ ಇದು ಬಹಳ ಇಂಪಾರ್ಟೆಂಟ್ ಆಗಿದೆ. ಆದಕಾರಣ ತಾವು ಪ್ರಶ್ನೋತ್ತರವನ್ನು ಸಸ್ಪೆಂಡ್ ಮಾಡಿ, ಪ್ರಶ್ನೋತ್ತರವನ್ನು ಮುಂದಕ್ಕೆ ಹಾಕಿ ಇದನ್ನು ಮೊದಲು ತೆಗೆದುಕೊಳ್ಳಬೇಕು ಎನ್ನತಕ್ಕಂಥಹ ವಾದ ನಮ್ಮದು ಇದೆ. ಅದಕ್ಕೆ ಅವರೂ ಕೂಡ ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೆ, ಆದರೆ ಅವರು ಕೊನೆಗೆ ಏನು ಹೇಳಬೇಕೋ ಅದನ್ನೇ ಹೇಳಿದರೇ ಹೊರತಾಗಿ ನಮ್ಮ ಕಡೆಗೆ ಅವರು ಒಲವು ತೋರಿಸಲಿಲ್ಲ. ಇದರ ಬಗ್ಗೆ ಚರ್ಚೆಗೆ ಅವರು ಆಸ್ಪದ ಮಾಡಿ ಕೊಡಲಿಲ್ಲ. ಅದಕ್ಕಾಗಿ ದಯವಿಟ್ಟು ತಮಗೆ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ತಾವು ವಿಷಯದ ಪ್ರಾಮುಖ್ಯತೆಯನ್ನು ಅರ್ಥೈಸಿ ಪ್ರಶ್ನೋತ್ತರ ಸಸ್ಪೆಂಡ್ ಮಾಡಿ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆ.

ಅಧ್ಯಕ್ಷರು : ಇಂತಹ ಸಂದರ್ಭಗಳು ಅನೇಕ ಸಲ ಈ ಸದನದಲ್ಲಿ ಒದಗಿ ಬಂದಿವೆ. ತಾವು ಬಿನ್ನಹ ಮಾಡತಕ್ಕಂಥದ್ದು ಸಹಜ. ಮೊನ್ನೆ ನಾವು ಸಂತಾಪ ಸೂಚಕ ನಿರ್ಣಯ ಅಷ್ಟೇ ತೆಗೆದುಕೊಂಡಿದ್ದೇವೆ. ನಿನ್ನೆ ಬಡ್ಜೆಟ್ ಮಂಡನೆ ಇತ್ತು. ಅಧಿವೇಶನ ಪ್ರಾರಂಭವಾದ ಮೇಲೆ ಇಷ್ಟು ಮಹತ್ವದ ವಿಷಯ ಇಲ್ಲಿ

ಚರ್ಚೆ ಮಾಡಲಿಕ್ಕೆ ಅವಕಾಶ ಸಿಕ್ಕಿದ್ದು ಇವೊತ್ತೇ. ಅದಕ್ಕಾಗಿ ಪ್ರಶ್ನೋತ್ತರ ಸಸ್ಪೆಂಡ್ ಮಾಡಿ ಎಂದು ತಾವು ಹೇಳಿದ್ದೀರಿ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಪ್ರಶ್ನೋತ್ತರ ಆದ ನಂತರ ತೆಗೆದುಕೊಳ್ಳೋಣ ತೊಂದರೆ ಇರುವುದಿಲ್ಲ. ಇವೊತ್ತಿನ ಹದಿನೈದು ಪ್ರಶ್ನೆಗಳಲ್ಲಿ ಒಂದು ಪ್ರಶ್ನೆ ಚಂದ್ರಶೇಖರ್ ನಾಯಕ್ ವರದು ಬಿಟ್ಟರೆ ಉಳಿದ ಹದಿನಾಲ್ಕು ಪ್ರಶ್ನೆಗಳು ವಿವಿಧ ವಿರೋಧ ಪಕ್ಷದ ಸದಸ್ಯರುಗಳು ಕಳುಹಿಸಿ ಕೊಟ್ಟಿದ್ದಾರೆ. ಅವರದೂ ಪಾವಿತ್ರ್ಯವಾದಂಥ ಹಕ್ಕು. ಇದು ಪ್ರಶ್ನೋತ್ತರ ಬಹಳ ಪ್ರಮುಖವಾದಂಥ ಒಂದು ಕಲಾಪ. ತಾವು ಎಲ್ಲರೂ ಅರಿತವರಿದ್ದೀರಿ. ಅನುಭವಶಾಲಿಗಳೂ ಇದ್ದೀರಿ, ನೀವು ಎತ್ತಿರತಕ್ಕಂಥ ವಿಷಯದ ಮಹತ್ವ ಮತ್ತು ಪ್ರತಿಪಾದನೆ ಮಾಡಿರತಕ್ಕಂಥ ಅಂಶಗಳ ಬಗ್ಗೆ ನನ್ನ ಮನಸ್ಸಿನ ಒಪ್ಪಿಗೆ ಇದೆ. ಆದರೆ ಕಲಾಪವನ್ನು ಸ್ವಲ್ಪ ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗೋಣ. ಪ್ರಶ್ನೋತ್ತರ ನಂತರ ಅದನ್ನು ತೆಗೆದುಕೊಳ್ಳೋಣ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ಸಹಕರಿಸಿ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಬೈಂದೂರು ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವುದು.

136 - ಶ್ರೀ ಎ. ಎಂ. ಜಯರಾಮ ಶೆಟ್ಟಿ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಂದೂರು ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ?

ಆ) ಈತನಕ ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸದೆ ಇರಲು ಕಾರಣವೇನು ?

ಇ) ಸದರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸದರಿ ಹುದ್ದೆಯನ್ನು ಯಾವಾಗ ಭರ್ತಿಮಾಡಲಾಗುವುದು ?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಜಿಲ್ಲಾ ಪಂಚಾಯತ್‌ನಿಂದ ಪ್ರಸ್ತಾವನೆ ಬಂದಿರುವುದಿಲ್ಲ.

ಇ) ಬಂದಿದೆ.

ಈ) ಕರ್ನಾಟಕ ಲೋಕಸೇವಾ ಆಯೋಗದಿಂದ400 ವೈದ್ಯರುಗಳನ್ನು ಆಯ್ಕೆ ಮಾಡಲಾಗಿದೆ. ನೇಮಕಾತಿ ನೀಡಿದ ಸಮಯದಲ್ಲಿ ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವತ್ತ ಆದ್ಯ ಗಮನ ನೀಡಲಾಗುವುದು.

ಶ್ರೀ ವಿ.ಎಂ. ಜಯರಾಮ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಸ್ವಲ್ಪ ಹೇಳಬಯಸುತ್ತೇನೆ. ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೈಂದೂರು ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರ. ಆರೋಗ್ಯ ಇಲಾಖೆಯವರು ಬೇರೆ ಕ್ಷೇತ್ರಕ್ಕಿಂತ ಇಪ್ಪತ್ತು ವರ್ಷಗಳ ಹಿಂದೆ ಹಾಕಿದ್ದಾರೆಂದರೆ ಫಾಸ್ಟಾಗಲಿಕ್ಕಿಲ್ಲ. ಈ ಆಸ್ಪತ್ರೆ 1955ರಲ್ಲಿ ಆಗಿದೆ. ಬ್ರಿಟೀಷರ ಕಾಲದಿಂದ ಸಹ ಇದು ಮದ್ರಾಸ್ ಸರ್ಕಾರದಲ್ಲಿ ನಡೆಸಿಕೊಂಡು ಬಂದಂಥ ಒಂದು ಆಸ್ಪತ್ರೆ. ಅಲ್ಲಿ ಒಬ್ಬ ಮಹಿಳಾ ವೈದ್ಯರು ಇಲ್ಲ. ಅಲ್ಲಿ ಇದ್ದಂಥ ವೈದ್ಯರಿಗೆ ಐದು ಆಸ್ಪತ್ರೆಗಳ ಒಂದು ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅಲ್ಲಿಯ ಆಸ್ಪತ್ರೆ ಅಸ್ತವ್ಯಸ್ತವಾಗಿದೆ. ಆದ್ದರಿಂದ ಯಾವುದೇ ರೀತಿಯ ಪ್ರಯೋಜನ ಜನರಿಗೆ ಸಿಕ್ಕುತ್ತಿಲ್ಲ. ಅದರಲ್ಲೂ ಹಿಂದಿನ ಸರ್ಕಾರದವರು ಇದನ್ನು ಅಪ್‌ಗ್ರೇಡ್ ಮಾಡಿದ್ದಾರೆ. ಅದನ್ನು ಸಹ ಕೆಳಮಟ್ಟಕ್ಕೆ ತಂದಿದ್ದಾರೆ. ಇವೊತ್ತು ಬೈಂದೂರು ಒಂದು ತಾಲ್ಲೂಕು ಆಗುವ ಪರಿಸ್ಥಿತಿಯಲ್ಲಿರುವಾಗ ಈ ಆಸ್ಪತ್ರೆಯ ಗುಣಮಟ್ಟ ಬಹಳ ಕೆಳಮಟ್ಟದಲ್ಲಿದೆ. ಇದರ ಬಗ್ಗೆ ಮಾನ್ಯ ಸಚಿವರು ಮುತುವರ್ಜಿ ವಹಿಸಿ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಬೈಂದೂರು ಕ್ಷೇತ್ರಕ್ಕೆ ಸೇರಿದ ಆಸ್ಪತ್ರೆ ಹಿಂದೆ ಸಬ್ಸಿಡಿಯರಿ ಹೆಲ್ತ್ ಸೆಂಟರ್ ಎಂದು ಆಗಿತ್ತು. 1985-86ರಲ್ಲಿ ಆ ಸಬ್ಸಿಡಿಯರಿ ಹೆಲ್ತ್ ಸೆಂಟರನ್ನು ಬದಲಾವಣೆ ಮಾಡಿದ್ದಾರೆ. ಸಬ್ಸಿಡಿಯರಿ ಹೆಲ್ತ್ ಸೆಂಟರ್‌ನಲ್ಲಿ ವೈದ್ಯರು ಇರುತ್ತಿರಲಿಲ್ಲ. ಆದರೆ ಕಮ್ಯೂನಿಟಿ ಮೆಡಿಸಿನ್ ಬಗ್ಗೆ ಕನಿಷ್ಟ ಮಾಹಿತಿ ಇರುವ ಏಳು ಜನರನ್ನು ಬಾಂಬೆಗೆ ಕಳುಹಿಸಿ ಟ್ರೇನಿಂಗ್ ಕೊಡಿಸಿ ಮಾಡುತ್ತಿದ್ದರು. ಆದು ಈಗ ಪರಿವರ್ತನೆ ಆಗಿದೆ. ಆ ನಂತರ 1985-86ರಲ್ಲಿ ಇದನ್ನು ಪಿ.ಹೆಚ್.ಸಿ. ಎಂದು ಮಾಡಿದರು. ಮತ್ತು ಲೇಡಿ ಮೆಡಿಕಲ್ ಆಫೀಸರ್ ಪೋಸ್ಟ್ ಕೂಡ ಮಂಜೂರು ಆಗಿದೆ. ಈಗ ಲೋಕಸೇವಾ ಆಯೋಗದಲ್ಲಿ ಈ ತಿಂಗಳ ಹನ್ನೊಂದನೇ ತಾರೀಖು ಮುಖ್ಯಕಾರ್ಯದರ್ಶಿಯವರು ಚರ್ಚೆ ಮಾಡಿದ್ದಾರೆ. ಇನ್ನು ಕೇವಲ ಐವತ್ತು ಸರ್ಟಿಫಿಕೇಟ್ ವೇರಿಫಿಕೇಷನ್‌ಆಗಬೇಕಾಗಿದೆ. ಇನ್ನು ಇಪ್ಪತ್ತು ದಿನ ಅಥವಾ ಒಂದು ತಿಂಗಳಲ್ಲಿ ಮಹಿಳಾ ವೈದ್ಯರನ್ನು ಹಾಕುವುದರ ಜೊತೆಗೆ ಮೇಲ್ದರ್ಜೆಗೆ ಏರಿಸುವಂಥ ಆಗತ್ಯ ಇದೆಯೋ ಇಲ್ಲವೋ ಎಂದು ಹೇಳಿ ಸ್ಥಳೀಯ ಜಿಲ್ಲಾ ಪರಿಷತ್‌ನಿಂದ ಸಮಗ್ರವಾದ ವರದಿಯನ್ನು ತರಿಸಿಕೊಂಡು ಕ್ರಮವನ್ನು ಕೈಗೊಳ್ಳುತ್ತೇನೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಲ್ಲಿ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಐ.ಎಂ. ಜಯರಾಂ ಶೆಟ್ಟಿ : ಇಡೀ ಕ್ಷೇತ್ರದಲ್ಲಿ ಇರುವುದು ಒಂದೇ ಒಂದು ಆಸ್ಪತ್ರೆ. ಅಲ್ಲಿ ಒಬ್ಬ ಮಹಿಳಾ ವೈದ್ಯರು, ವೈದ್ಯರು ಇಲ್ಲ ಎಂದರೆ ಆ ಕ್ಷೇತ್ರದ ಬಡ ಜನರ ಆರೋಗ್ಯ ಹೇಗೆ ಆಗಬೇಕು ಎಂಬುದನ್ನು ಆಲೋಚನೆ ಮಾಡಿ.

ಅಧ್ಯಕ್ಷರು : ಜಯರಾಮಶೆಟ್ಟಿಯವರೇ, ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ ಲೋಕಸೇವಾ ಆಯೋಗ ಯಾರನ್ನು ಆಯ್ಕೆ ಮಾಡಿದ್ದಾರೆ ಅವರ ಸರ್ಟಿಫಿಕೇಟ್ ವೇರಿಫಿಕೇಷನ್ ಮಾಡುತ್ತಿದೆ. ಇನ್ನು 50 ಮಾತ್ರ ಬಾಕಿ ಇವೆ. ಅವರೆಲ್ಲರಿಗೂ ಕೂಡ ಪೋಸ್ಟಿಂಗ್ಸ್ ಕೊಡುತ್ತೇವೆಂದು ಹೇಳಿದ್ದಾರೆ. ಮಹಿಳಾ ವೈದ್ಯರನ್ನು ಕೂಡ ಅಲ್ಲಿ ನೇಮಿಸುತ್ತೇವೆ. ಅದರ ಜೊತೆಗೆ ಅದನ್ನು ಮೇಲ್ದರ್ಜೆಗೆ ಏರಿಸುವ ಕೆಲಸವನ್ನು ಕೂಡ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎ. ಎಂ. ಜಯರಾಮ ಶೆಟ್ಟಿ : ಮೇಲ್ದರ್ಜೆಗೂ ಕೂಡ ಏರಿಸುತ್ತಾರೆಯೇ?

ಡಾ: ಹೆಚ್.ಸಿ. ಮಹದೇವಪ್ಪ : ಅದು ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುತ್ತದೆ. ಕಮ್ಯೂನಿಟಿ ಹೆಲ್ತ್ ಸೆಂಟರ್‌ಗೆ ಒಂದು ಲಕ್ಷ ಜನಸಂಖ್ಯೆ ಬರುತ್ತದೆ. ಆದ್ದರಿಂದ ಸಂಪೂರ್ಣವಾದ ಮಾಹಿತಿಯನ್ನು ತರಿಸಿಕೊಳ್ಳುವವರೆಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಆಡಳಿತದ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣ ಆದಮೇಲೆ ಮೇಲ್ದರ್ಜೆಗೆ ಏರಿಸುವುದು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಬರುತ್ತದೆ. ತಕ್ಷಣ ಎಲ್ಲಾ ಮಾಹಿತಿಯನ್ನು ತರಿಸಿಕೊಂಡು ಆ ವಿಚಾರದಲ್ಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಇದು ಅವರ ಕ್ಷೇತ್ರಕ್ಕೆ ಸಂಬಂಧಿಸಿದ್ದುದು, ಆದ್ದರಿಂದ ಉಪಪ್ರಶ್ನೆಗಳು ಯಾರೂ ಕೇಳುವುದು ಬೇಡ.

ಪುತ್ತೂರು ಉಪ್ಪಿನಂಗಡಿ ಪ್ರಥಮ ದರ್ಜೆ ಕಾಲೇಜಿಗೆ ಖಾಯಂ ಕಟ್ಟಡ

137 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕು ಉಪ್ಪಿನಂಗಡಿ ಪ್ರಥಮ ದರ್ಜೆ ಕಾಲೇಜಿಗೆ ಖಾಯಂ ಕಟ್ಟಡವನ್ನು ಒದಗಿಸುವ ಪ್ರಸ್ತಾಪ ಇದೆಯೇ? ಹಾಗಿದ್ದರೆ ಅದರ ಯೋಜನಾ ವೆಚ್ಚವೆಷ್ಟು?

ಆ) ಯಾವಾಗ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು, ಮತ್ತು ಈ ವರ್ಷದ ಬಜಟ್‌ನಲ್ಲಿ ಕಾಯ್ದಿರಿಸಲಾಗಿರುವ ಅಂದಾಜು ಮೊತ್ತವೆಷ್ಟು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಕಟ್ಟಡ ನಿರ್ಮಾಣಕ್ಕೆ ನಿವೇಶನ ಒದಗಿಸಲಾಗಿದ್ದು ಖಾಯಂ ಕಟ್ಟಡ ಒದಗಿಸುವ ಪ್ರಸ್ತಾವನೆ ಇದೆ. 1996-97ನೇ ಸಾಲಿನಲ್ಲಿ ಅನುದಾನ ಒದಗಿಸಿಲ್ಲ.

ಆ) ಪರಿಶೀಲನೆಯಲ್ಲಿದೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿರುವಂಥದ್ದು ಎರಡು ಪ್ರಶ್ನೆಗಳು ಒಂದು ಏನೆಂದರೆ ಸುಮಾರು ಹದಿನಾಲ್ಕು ವರ್ಷಗಳ ಹಿಂದೆ ಶುರುವಾದಂಥ ಒಂದು ಕಾಲೇಜು ಇದೆ. ಆದಲೇ ಅದಕ್ಕೆ ಬಂದಂಥ ಹತ್ತು ಎಕರೆ ಜಾಗ. ಆ ಜಮೀನನ್ನು ನಮ್ಮ ಎಲ್ಲಾ ಊರಿನವರ ವತಿಯಿಂದ ಸಮತಟ್ಟು ಮಾಡಿ ಅಲ್ಲಿ ಸುಮಾರು ಏಳು ವರ್ಷಗಳ ಹಿಂದೆಯೇ ಕಟ್ಟಡ ಆಗಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದೆವು. ಈಗ ಸುಮಾರು ಬಿ.ಎ., ಮತ್ತು ಬಿ.ಕಾಂ. ಇರುವಂಥ ಸ್ಥಳದಲ್ಲಿ ಓದುತ್ತಿರುವ ಸುಮಾರು 175 ವಿದ್ಯಾರ್ಥಿಗಳಿದ್ದಾರೆ. ಈಗ ಅಲ್ಲಿ ಶಾಲಾ ಕಟ್ಟಡ ಇಲ್ಲ, ಅದು ಜರೂರಾಗಿ ಆಗಬೇಕಾಗಿದೆ. ತಾವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಆದರೆ ಒಂದು ಸ್ಪಷ್ಟವಾದ

ವಿಚಾರವನ್ನು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಪರಿಶೀಲನೆಯಲ್ಲಿದೆ ಎಂದರೆ ಮುಂದಿನ ವರ್ಷ ಖಂಡಿತವಾಗಿ ಕಟ್ಟಡವನ್ನು ಒದಗಿಸುತ್ತೀರೋ ಎಂಬುದು ನನ್ನ ಪ್ರಶ್ನೆ. ಇನ್ನು ಎರಡನೇ ಪ್ರಶ್ನೆ ಕಟ್ಟಡವನ್ನು ಒದಗಿಸುವಂಥ ವ್ಯವಸ್ಥೆ ಇದ್ದರೆ ಯಾವೊತ್ತಿನಿಂದ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೀರಿ?

ಶ್ರೀ ಬಿ. ಸೋಮಶೇಖರ್: ಈ ಕಟ್ಟಡದ ಕೊರತೆ ಅವರ ಒಂದೇ ಕಾಲೇಜಿನಲ್ಲಿ ಇಲ್ಲ. ಇಡೀ ರಾಜ್ಯದಲ್ಲಿ ಅನೇಕ ಕಾಲೇಜುಗಳಲ್ಲಿ ಕೊರತೆ ಇದೆ. ಸುಮಾರು 150 ಸರ್ಕಾರಿ ಕಾಲೇಜುಗಳಲ್ಲಿ ಕೇವಲ 60 ಕಾಲೇಜುಗಳಿಗೆ ತನ್ನದೇ ಆದ ಕಟ್ಟಡ ಇದೆ ಎಂದು ನಾನು ಅನೇಕ ಸಾರಿ ಹೇಳಿದ್ದೇನೆ. ಇನ್ನು ಸುಮಾರು 90 ಸರ್ಕಾರಿ ಕಾಲೇಜುಗಳಲ್ಲಿ ತನ್ನದೇ ಆದ ಕಟ್ಟಡವಿಲ್ಲ. ಕಟ್ಟಡ ಏತಕ್ಕೆ ಇಲ್ಲ ಎಂದರೆ ಅದಕ್ಕೆ ಅನೇಕ ಕಾರಣಗಳು ಇವೆ. ಕೆಲವು ಕಡೆ ಜಾಗ ಕೊಟ್ಟಿಲ್ಲ, ಕೆಲವು ಕಡೆ ಜಾಗ ಕೊಟ್ಟರೂ ಹಣ ಒದಗಿಸಿಕೊಡಲು ಆಗಿಲ್ಲ. ಈ ಸಾರಿ ಹಣದ ಪರಿಸ್ಥಿತಿ ನೋಡಿಕೊಂಡು ಸರ್ಕಾರ ಈ ಕೊರತೆಯ ಬಗ್ಗೆ ಕ್ರಮ ಕೈಗೊಳ್ಳುತ್ತದೆ. ಯಾವುದಾದರೊಂದು ರೂಪದಲ್ಲಿ ಹಣವನ್ನು ಒದಗಿಸಿಕೊಡಬೇಕಾಗುತ್ತದೆ. ಸರ್ಕಾರದವರೇ ಎಲ್ಲಾ ಕಟ್ಟಡಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಈಗಾಗಲೇ ನಾನು ತ್ವರಿತ ಗತಿಯಿಂದ ಪರಿಶೀಲನೆ ಮಾಡುತ್ತಿದ್ದೇನೆ. ಯಾವುದಾದರೊಂದು ರೂಪದಲ್ಲಿ ಕಟ್ಟಡಗಳನ್ನು ಒದಗಿಸುವುದಕ್ಕೆ ಯೋಜನೆಯನ್ನು ತಯಾರು ಮಾಡುತ್ತೇನೆ ಎನ್ನುವಂಥ ಆಶ್ವಾಸನೆಯನ್ನು ಕೊಡುತ್ತೇನೆ. ಆದರೆ ಇವರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಜಮಖಂಡಿ ತಾಲ್ಲೂಕಿನ ಗೋಠೆ ಮತ್ತು ತೊದಲುಬಾಗಿ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವುದು.

139 - ಶ್ರೀ ಜೆ.ಬಿ. ಪಾಟೀಲ್ (ಬೀಳಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ಗೋಠೆ ಮತ್ತು ತೊದಲಬಾಗಿ ಗ್ರಾಮಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆಯಿದ್ದು 1997-98ನೇ ಸಾಲಿನಲ್ಲಿ ತೆರೆಯಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ 1997-98ನೇ ಆರ್ಥಿಕ ಸಾಲಿನಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರವು 1997-98ನೇ ಸಾಲಿನಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.

ಶ್ರೀ ಜಿ.ಟಿ. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಯೇ ಬೇರೆ ಇಲ್ಲಿ ಆಚ್ಚಾದುದೇ ಬೇರೆ. ನಾನು ಕೇಳಿದ ಪ್ರಶ್ನೆ 1996-97ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಪ್ರಾಥಮಿಕ ಆರೋಗ್ಯ

ಕೇಂದ್ರಗಳನ್ನು ಪ್ರಾರಂಭಿಸಿದ್ದೀರಿ ಎಂದು. ಜಿಲ್ಲಾವಾರು ಇದುವರೆಗೆ ಯಾವುದೇ ಕೇಂದ್ರವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳದೇ ಇರುವ ಸಂದರ್ಭದಲ್ಲಿ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ? ಬೀಳಗಿ ತಾಲ್ಲೂಕಿನ ಜಮಖಂಡಿ ತಾಲ್ಲೂಕಿನ ಗೋಠೆ ಮತ್ತು ತೊದಲಬಾಗಿ ಗ್ರಾಮಗಳಲ್ಲಿ ಹಲವಾರು ವರ್ಷಗಳಿಂದ ಬೇಡಿಕೆ ಇದೆ;

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. ಜಗದೀಶ್ ತಾವು ಕಳುಹಿಸಿದ ಪ್ರಶ್ನೆ ವಿಕೃತಗೊಂಡಿದೆ ಎಂದು ಹೇಳುತ್ತಿದ್ದೀರಲ್ಲಾ, ದಯವಿಟ್ಟು ತಮ್ಮ ಮೂಲ ಪ್ರಶ್ನೆಯನ್ನು ಕಳುಹಿಸಿಕೊಡಿ, ಏಕೆ ಹಾಗಾಯಿತು ಎಂದು ನಾನು ನೋಡುತ್ತೇನೆ. ಮುಂದೆ ಅವರ ಪ್ರಶ್ನೆ ಇರುವ ದಿವಸ ಅದನ್ನು ಹಾಕಿಸಿ ನಿಮಗೆ ಉತ್ತರ ತರಿಸಿಕೊಡುತ್ತೇನೆ. ಹಾಗೆ ಆಗಬಹುದಲ್ಲಾ.

ಶ್ರೀ ಜೆ.ಟಿ. ಪಾಟೀಲ್ : ಆಯಿತು ಮಾನ್ಯ ಅಧ್ಯಕ್ಷರೇ.

ತುರುವೆಕೆರೆ ತಾಲ್ಲೂಕಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ ನಡೆಯಿತೆನ್ನಲಾದ ಭ್ರಷ್ಟಾಚಾರ.

140 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಜಿಲ್ಲೆ ತುರುವೆಕೆರೆ ತಾಲ್ಲೂಕಿನ ಜಿಲ್ಲಾ ಪಂಚಾಯ್ತಿ ಇಂಜಿನಿಯರಿಂಗ್ ಉಪವಿಭಾಗದವರು ಮಾಯಸಂದ್ರ ಹೋಬಳಿಯಲ್ಲಿ 96-97ನೇ ಸಾಲಿನ ವಿವಿಧ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಕೈಗೊಳ್ಳದೆ ಪೂರ್ಣಗೊಂಡಂತೆ ತೋರಿಸಿ ಭಾರಿ ಪ್ರಮಾಣದ ಭ್ರಷ್ಟಾಚಾರವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಮಾಯಸಂದ್ರ ಹೋಬಳಿಯಲ್ಲಿ ಕೈಗೊಂಡ ಎಲ್ಲಾ ಕಾಮಗಾರಿಗಳ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದೆ?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆ ವಿವಿಧ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದೆ ಪೂರ್ಣಗೊಂಡಂತೆ ತೋರಿಸಿ ಭಾರೀ ಪ್ರಮಾಣದ ಭ್ರಷ್ಟಾಚಾರವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನನ್ನ ಪ್ರಶ್ನೆಗೆ ಇಲ್ಲ ಬಂದಿಲ್ಲ ಎಂದು ಹೇಳಿದ್ದೀರಿ. ನಾನು ಕೇಳುತ್ತೇನೆ ಈಗ ಅಧಿಕಾರ ಡೀ ಸೆಂಟ್ರಲೆಸ್ ಆದ ಮೇಲೆ ಜಿಲ್ಲಾಪರಿಷತ್ ಇಂಜನಿಯರಿಂಗ್ ವಿಭಾಗ

ಇರಬಹುದು, ಅಥವಾ ಜಿಲ್ಲಾಪರಿಷತ್ ಅಧ್ಯಕ್ಷರು ಇರಬಹುದು, ಇವೊತ್ತು ಮುಖ್ಯಕಾರ್ಯದರ್ಶಿಗಳು ಇರಬಹುದು, ಅವರ ಗಮನಕ್ಕೆ ಬಂದಾಗ ಅದು ಸರ್ಕಾರದ ಗಮನಕ್ಕೆ ಬಂದ ಹಾಗೆ ಹೌದೋ ಇಲ್ಲವೋ? ಇನ್ನು ಎರಡನೆಯದಾಗಿ ವಿವಿಧ ಯೋಜನೆಗಳಡಿಯಲ್ಲಿ ತುರುವೆಕೆರೆಗೆ ಬಂದಿರತಕ್ಕಂಥ ಹಣದ ಬಗ್ಗೆ ಅಂಕಿ ಅಂಶಗಳ ತಮ್ಮ ಹತ್ತಿರ 1996-97ನೇ ವರ್ಷಕ್ಕೆ ಸಂಬಂಧಪಟ್ಟಂತೆ ಇದೆಯೇ? ಈ ವಿವಿಧ ಯೋಜನೆಗಳಡಿಯಲ್ಲಿ ಅಡಿಶನಲ್ ಜೆಆರ್‌ವೈ ಇರಬಹುದು, ಅಂಬೇಡ್ಕರ್ ಮತ್ತು ಇಂದಿರಾ ಆವಾಸ್ ಯೋಜನೆಗಳು ಇವೆ. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬೇರೆ ಬೇರೆ ಯೋಜನೆಗಳ ಕೆಳಗೆ ಎಷ್ಟು ಹಣ ಬಂದಿದೆ ಎನ್ನತಕ್ಕಂಥದ್ದು ಮೂಲ ಪ್ರಶ್ನೆಯಲ್ಲಿ ಸೇರಿಲ್ಲ. ಆದುದರಿಂದ ತಕ್ಷಣದಲ್ಲಿ ನನ್ನ ಹತ್ತಿರ ಈ ಬಗ್ಗೆ ಮಾಹಿತಿ ಇಲ್ಲ. ಆದರೆ, ಖಂಡಿತವಾಗಿ ಈ ಬಗ್ಗೆ ಮಾನ್ಯ ಸದಸ್ಯರಿಗೆ ಪತ್ರ ಮುಖೇನ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ. ಆದರೆ ನಾವು ಈಗಾಗಲೇ ಈ ಪ್ರಶ್ನೆ ಬಂದಮೇಲೆ ಅಲ್ಲಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಈ ವಿಷಯವನ್ನು ತಿಳಿಸಿ ಅಲ್ಲಿ ಸ್ಥಳ ಪರಿಶೀಲನೆ ಮಾಡಿ ಕೂಲಂಕುಷವಾದ ವರದಿಯನ್ನು ಮಾಯಸಂದ್ರ ಹೋಬಳಿಗೆ ಸಂಬಂಧಪಟ್ಟಂತೆ ನಮಗೆ ಕಳುಹಿಸಿಕೊಡಬೇಕೆಂದು ಹೇಳಲಾಗಿದೆ. ಆದರೆ ಇವೊತ್ತಿನ ಮಟ್ಟಿಗೆ ಮಾತ್ರ ಅವ್ಯವಹಾರ ಆಗಿರತಕ್ಕಂಥದ್ದರ ಬಗ್ಗೆ ನಿರ್ದಿಷ್ಟ ಪ್ರಕರಣಗಳಾಗಲಿ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ದೂರುಗಳು ಬಂದಿಲ್ಲ. ಆದರೆ ಈಗ ತಾವು ಉಪನಾಯಕರಿದ್ದೀರಿ ಮತ್ತು ಜವಾಬ್ದಾರಿಯಿಂದ ಈ ಮಾತನ್ನು ಹೇಳಿರುವುದರಿಂದ ಈಗಾಗಲೇ ನಾವು ಆಜ್ಞೆ ಮಾಡಿದ್ದೇವೆ. ಆ ಪ್ರಕಾರ ವರದಿ ಬಂದನಂತರ ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಅಂಕಿ ಅಂಶ ಹತ್ತಿರ ಇದೆ. ನಾನೂ ಕೂಡ ತುರುವೇಕೆರೆ ಆಫೀಸ್‌ಗೆ ಹೋಗಿ ಮಾಹಿತಿ ಪಡೆದುಕೊಂಡು ಪರೀಕ್ಷೆ ಮಾಡಿಕೊಂಡು ಬಂದು ಇಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿ ಕುಳಿತು ಈ ಬಗ್ಗೆ ನಾನು ಆರೋಪವನ್ನು ಮಾಡುತ್ತಿದ್ದೇನೆ. ಸುಮಾರು 1.35 ಲಕ್ಷ ರೂ.ಗಳು ಅಡಿಷನಲ್ ಜೆ.ಆರ್.ವೈ ನಲ್ಲಿ ತುರುವೇಕೆರೆಯೊಂದಕ್ಕೆ ಹಣ ಬಂದಿದೆ. ಇದರ ಜೊತೆಗೆ ಆಶ್ರಯ, ಅಂಬೇಡ್ಕರ್ ಕೂಡ ಬೇರೆ ಇರಬಹುದು. ಅದರಲ್ಲಿ ಇವೊತ್ತು ನಾನು ಹೇಳಬೇಕೆಂದರೆ, ಒಂದೇ ದಿವಸದಲ್ಲಿ ಅಂದರೆ ದಿನಾಂಕ 06-08-96ರ ಒಂದೇ ರಾತ್ರಿಯಲ್ಲಿ ಸುಮಾರು 107 ಬಿಲ್‌ಗಳು ಪಾಸಾಗಿ ಸುಮಾರು 45 ಲಕ್ಷ ರೂ.ಗಳ ಬಿಲ್ಸ್‌ಗಳು ಪಾಸಾಗುತ್ತವೆ. ಅಂದ ಹಾಗೆ ತಮ್ಮನ್ನು ನಾನು ಕೇಳುವುದೇನೆಂದರೆ ವಿಶೇಷವಾಗಿ ಇ.ಎ.ಎಸ್. ಸ್ಕೀಮ್ ಇಲ್ಲ ಎನ್ನುವ ಕಾರಣಕ್ಕೋಸ್ಕರ ತುರುವೆಕೆರೆಗೆ ಈ ಹಣವನ್ನು ಕೊಡಲಾಗಿದೆ. ಒಂದೇ ದಿವಸದಲ್ಲಿ 45 ಲಕ್ಷ ರೂ.ಗಳು ಬಿಲ್ ಪಾಸಾಗಿದೆ. ನಮ್ಮಗಮನಕ್ಕೆ ಬಂದಿಲ್ಲ ಎನ್ನುವುದು ಸರಿಯಲ್ಲ. ಆ ಬಗ್ಗೆ ಕಾಪಿಗಳು ಇದೆ. ಡೆಪ್ಯೂಟಿ ಸೆಕ್ರೆಟರಿಯವರೂ ಕೂಡ ಅಲ್ಲಿಗೆ ಹೋಗಿ ಎನ್‌ಕ್ವೈರಿ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅವ್ಯವಹಾರಆಗಿದೆಯೆಂದು ಹೇಳಿದ್ದಾರೆ . ನಾನು ಇವೊತ್ತು ಜವಾಬ್ದಾರಿಯುತ ಸ್ಥಾನದಲ್ಲಿ ಕುಳಿತು ಹೇಳುತ್ತಿದ್ದೇನೆ, 50 ರಿಂದ 60 ಲಕ್ಷದವರೆಗೆ ಒಬ್ಬ ಇಂಜಿನಿಯರ್ ವ್ಯಾಪ್ತಿಯಲ್ಲಿ ಅವ್ಯವಹಾರ

ಆಗಿದೆ. ಇದಕ್ಕೆ ಮೂಲವಾಗಿ ಈಗಾಗಲೇ ಒಬ್ಬ ಇಂಜಿನಿಯರ್‌ನ್ನು ಸಸ್ಪೆಂಡ್ ಮಾಡಿದ್ದಾರೆ, ಸಸ್ಪೆಂಡ್ ಮಾಡಿಲ್ಲವೆಂದು ನಾನು ಹೇಳುವುದಿಲ್ಲ, ನಾವು ಈ ಬಗ್ಗೆ ಆರೋಪವನ್ನು ಮಾಡಿದಮೇಲೆ ಸಸ್ಪೆಂಡ್ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಈ ಬಗ್ಗೆ ಇವೊತ್ತು ಸಮಗ್ರವಾಗಿ ವಿಚಾರಣೆ ಮಾಡಿಸಿದರೆ ನಿಜವಾಗಿಯೂ ಅವ್ಯವಹಾರ ಆಗಿರುವುದು ಆಚೆಗೆ ಬರುತ್ತವೆ. ಇದು ಕೇವಲ ಮಾಯಸಂದ್ರ ಹೋಬಳಿ, ತುರುವೇಕೆರೆ ತಾಲ್ಲೂಕಿಗೆ ಸೀಮಿತ ಎನ್ನುವುದಕ್ಕಿಂತ ಇಡೀ ಜಿಲ್ಲೆಯ ವ್ಯಾಪ್ತಿಯಲ್ಲಿ ಇಂಥ ಒಂದು ವಾತಾವರಣ ಇರುವುದರಿಂದ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಜಿಲ್ಲಾ ಪಂಚಾಯತ್ ಇಂಜಿನಿಯರ್ ವ್ಯಾಪ್ತಿಯಲ್ಲಿ ಬರುವ ವರ್ಕ್ಸ್‌ಗಳನ್ನು ಮಾನಿಟರಿಂಗ್ ಮಾಡುವುದಕೋಸ್ಕರ ಏನಾದರೂ ಒಂದು ಸ್ವಾ ಡ್‌ಮಾಡುವ ಬಗ್ಗೆ ತಮ್ಮ ಅನುಭವದಲ್ಲಿ ಇದೆಯೇ, ಇದನ್ನು ಮಾಡಿಸುವುದಕ್ಕೆ ಸಾಧ್ಯವೇ? ಸ್ಕಾಡ್ ಮಾಡಿಸಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಇದರ ಜೊತೆಗೆ ಸಮಗ್ರವಾಗಿ ಸತ್ಯಾಂಶ ಈಚೆಗೆ ಬರಬೇಕಾದರೆ ಸಿ.ಓ.ಡಿ. ಎನ್‌ಕ್ವೈರಿ ಮಾಡಿಸಿದರೆ ಒಳ್ಳೆಯದು. ಏಕೆಂದರೆ ಪ್ರಭಾವಿ ಜನರು ಇದರ ಹಿಂದೆ ಇದ್ದೇ ಇರುತ್ತಾರೆ, ಅದರಲ್ಲಿ ಇಂಜಿನಿಯರ್‌ಗಳು ಮತ್ತು ಎಲ್ಲರೂ ಇರುತ್ತಾರೆ. ಒಬ್ಬ ಅಸಿಸ್ಟೆಂಟ್‌ಇಂಜಿನಿಯರ್ ಎ.ಇ.ಇ. ಆಗಿ ಕೆಲಸ ಮಾಡಿ ಸುಮಾರು 10 ವರ್ಷ ಇದ್ದು ಇವೊತ್ತು ಮಾಡಬಾರದ್ದನ್ನು ಮಾಡಿದ್ದಾರೆ. ಅಂದರೆ ಈ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಮಾಡಿಸುತ್ತೀರೋ ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಈಗ ಅವರು ಹೇಳಿದ ಹಾಗೆ ಬಹಳ ವ್ಯಾಪಕವಾಗಿ ಇಂಥ ದುರುಪಯೋಗ ಪ್ರಕರಣಗಳ ಬಗ್ಗೆ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ನಿಂದ ಬರುತ್ತಿವೆ. ಸುಮಾರು 100 ರಿಂದ 150 ಅಧಿಕಾರಿಗಳನ್ನು ನಾವು ಈಗಾಗಲೇ ಆಮಾನತ್ತಿನಲ್ಲಿಟ್ಟಿದ್ದೇವೆ. ಲೋಕಾಯುಕ್ತದವರಿಗೂ ಕಳುಹಿಸಿ ಕೊಟ್ಟಿದ್ದೇವೆ, ಕೆಲವು ಸಂದರ್ಭದಲ್ಲಿ ಸಿ.ಓ.ಡಿ. ಎನ್‌ಕ್ವರಿಯನ್ನೂ ಸಹ ಮಾಡಿದ್ದೇವೆ. ಈಗ ತಮ್ಮಲ್ಲಿಗೆ ಬಂದಿರತಕ್ಕ ಮಾಹಿತಿ ಪ್ರಕಾರ ನಾವು ಪ್ರಶ್ನೋತ್ತರ ಸಂದರ್ಭಗಳಲ್ಲೂ ಕೂಡ ನಮ್ಮ ಕಾರ್ಯದರ್ಶಿಗಳ ಜೊತೆ ಮಾತನಾಡಿದೆ. ಈ ಹಿಂದೆ ಅನೇಕ ಸಂದರ್ಭಗಳಲ್ಲೂ ಕೂಡ ಈ ಬಗ್ಗೆ ಹೇಳಲಾಗಿದ್ದು ಇದಕ್ಕೆ ಇನ್ಸ್‌ಪೆಕ್ಟ್‌ರೇಟ್ ತರಹ ಮಾಡಿ ಒಂದು ಸ್ಕಾಡ್ ಮಾಡುವ ಬಗ್ಗೆ ವ್ಯವಸ್ಥೆ ಮಾಡಬೇಕೆನ್ನುವ ಬಗ್ಗೆ ಯೋಜನೆಯನ್ನು ಮಾಡಿದ್ದೇವೆ. ಪ್ರಾಯಶಃ ಇನ್ನು ಸ್ವಲ್ಪ ದಿವಸಗಳಲ್ಲಿ ಒಂದು ನಿರ್ಣಯವನ್ನು ತೆಗೆದು ಕೊಂಡು ಇದನ್ನು ಮಾನಿಟರ್ ಮಾಡತಕ್ಕಂಥದ್ದರ ಬಗ್ಗೆ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇಲ್ಲಿ ದುರುಪಯೋಗವಾಗಿದೆ ಎಂದು ತಾವು ಏನು ಸೂಚಿಸಿದ್ದೀರಿ ಆ ಬಗ್ಗೆ ನಾವು ನಮ್ಮ ಅಧಿಕಾರಿಗಳಿಗೆ ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇನೆ. ಅಲ್ಲಿಂದ ಬರತಕ್ಕಂಥ ಮಾಹಿತಿಯನ್ನು ತೆಗೆದುಕೊಂಡು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಮತ್ತು ತಮಗೂ ಕೂಡ ಈ ಬಗ್ಗೆ ಮಾಹಿತಿಯನ್ನೊಳಗೊಂಡ ವರದಿಯನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಕುಂಭ್ಲೆ ಸುಂದರ್‌ರಾವ್‌ರವರೇ, ಪ್ರಶ್ನೆ 141 (1242)ಕ್ಕೆ ಸಂಬಂಧಪಟ್ಟ ಅರಣ್ಯ ಸಚಿವರ ಮಗಳ ಲಗ್ನ ಈವತ್ತು ಇದೆ. ಅವರು ಇವೊತ್ತು ಸದನಕ್ಕೆ ಬಂದಿಲ್ಲ. ಆದಕಾರಣ ನಿಮ್ಮ ಪ್ರಶ್ನೆಗೆ ಉತ್ತರಿಸಲು ಅವರು ಯಾರಿಗಾದರೂ ಒಪ್ಪಿಸಿರುತ್ತಾರೇನೋ ಎಂದು ನಾನು ತಿಳಿದುಕೊಂಡಿದ್ದೆ. ಆದರೆ

ಅವರು ಯಾರಿಗೂ ಒಪ್ಪಿಸಿಲ್ಲವೆಂದು ಕಾಣುತ್ತದೆ. ಆದುದರಿಂದ ಅರಣ್ಯ ಸಚಿವರು ಇದ್ದ ದಿವಸವೇ ನಿಮ್ಮ ಪ್ರಶ್ನೆಯನ್ನು ತೆಗೆದುಕೊಂಡು ಅವರಿಂದಲೇ ನಿಮಗೆ ಉತ್ತರವನ್ನು ಕೊಡಿಸುತ್ತೇನೆ.

ಅಧ್ಯಕ್ಷರು : ಮಂಜುನಾಥ್‌ರವರೇ, ನಿಮ್ಮ ಪ್ರಶ್ನೆ 142 (1244)ಕ್ಕೆ ಉತ್ತರಿಸಲು ಸರ್ಕಾರದವರು ಸ್ವಲ್ಪ ಕಾಲಾವಕಾಶವನ್ನು ಪಡೆದುಕೊಂಡಿದ್ದಾರೆ. ನಾನು ಉತ್ತರವನ್ನು ತರಿಸಿಕೊಡುತ್ತೇನೆ.

ಅಘನಾಶಿನಿ ನದಿಯಿಂದ ಚಿಪ್ಪು ತೆಗೆಯುವುದು.

143 - ಡಾ: ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪರಿಸರ, ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಘನಾಶಿನಿ ನದಿಯಲ್ಲಿ ಚಿಪ್ಪು ತೆಗೆಯಲು ಪರವಾನಗಿ ಕೊಡಲಾಗಿದೆಯೇ?*

ಆ) *ಹಾಗಿದ್ದಲ್ಲಿ, ದೊಡ್ಡ ಪ್ರಮಾಣದಲ್ಲಿ ಚಿಪ್ಪು ತೆಗೆಯುವುದರಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲವೆ?*

ಶ್ರೀ ಬಸವರಾಜ ನೀ. ಶಿವಣ್ಣನವರ್ (ಪರಿಸರ, ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು) :

ಅ) ಪರಿಸರ ಇಲಾಖೆಯು ಅನುಮತಿ ಕೊಟ್ಟಿಲ್ಲ. ಕೆಲವರು ಗಣಿ ಇಲಾಖೆಯ ಅನುಮತಿಯಿಂದ ಚಿಪ್ಪು ತೆಗೆಯುತ್ತಿದ್ದು, ಇದನ್ನು ಏಕೆ ನಿಲ್ಲಿಸಬಾರದೆಂದು ಕಾರಣ ಕೇಳಿ ಇವರಿಗೆ ಮಾಲಿನ್ಯ ನಿಯಂತ್ರಣ ಮಂಡಳಿ ನೋಟೀಸ್ ಕೊಟ್ಟಿದೆ.

ಆ) ಈಗಾಗಲೇ ಕಾರಣ ಕೇಳುವ ನೋಟೀಸು ಕೊಟ್ಟಿದ್ದು ಇದು ಪರಿಸರಕ್ಕೆ ಹಾನಿಯುಂಟು ಮಾಡುವುದೆಂದು ಖಾತ್ರಿಯಾದರೆ ಇದನ್ನು ತಡೆಯಲು ಕಾನೂನು ಪ್ರಕಾರ ಕ್ರಮಕ್ಕೆಗೊಳ್ಳಲಾಗುವುದು.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಅಘನಾಶಿನಿ ನದಿಯಲ್ಲಿ ಚಿಪ್ಪು ತೆಗೆಯಲು ಪರಿಸರ ಇಲಾಖೆ ಕೊಡದಿದ್ದರೂ ಕೆಲವರು ಗಣಿ ಇಲಾಖೆಯ ಅನುಮತಿಯಿಂದ ಚಿಪ್ಪು ತೆಗೆಯುತ್ತಿರುವುದರಿಂದ ಅದನ್ನು ಏಕೆ ನಿಲ್ಲಿಸಬಾರದು ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ನೋಟೀಸ್ ಕೊಡಲಾಗಿದೆ ಎಂದು ಸರ್ಕಾರ ಉತ್ತರ ಕೊಟ್ಟಿದೆ. ಇನ್ನು ಎರಡನೆಯದಾಗಿ ಈ ಪ್ರಶ್ನೆಯನ್ನು ಕೇಳಿ ಉತ್ತರವನ್ನು ಬರೆದ ಮೇಲಿಯೂ ಗಣಿಗಾರಿಕೆ ಇಲಾಖೆಯವರನ್ನು ಇವರು ಮತ್ತೆ ಕೇಳುತ್ತಾರಂತೆ. ನಾನು ಹೇಳುವುದೇನೆಂದರೆ ಈ ಚಿಪ್ಪು ತೆಗೆಯುತ್ತಿರುವುದನ್ನು ಕೂಡಲೇ ನಿಲ್ಲಿಸುತ್ತೀರೋ? ಇನ್ನೂ ಮೂರನೆಯದಾಗಿ ನಾನು ಹೇಳುವುದೇನೆಂದರೆ, ಈ ಚಿಪ್ಪು ಎಲ್ಲಾ ನದಿಗಳಲ್ಲಿ ಸಿಗುವುದಿಲ್ಲ, ಕೇವಲ ಕೆಲವೇ ನದಿಗಳಲ್ಲಿ ಮಾತ್ರ ಸಿಗುವುದು, ಇದರ ಆಧಾರದ ಮೇಲೆಯೇ ಜೀವನ ಮಾಡತಕ್ಕಂಥ ಸಾವಿರಾರು ಕುಟುಂಬಗಳು ಇವೆ.

ಅಧ್ಯಕ್ಷರು : ಒಂದು ನಿಮಿಷ ತಾವು ಕುಳಿತುಕೊಳ್ಳಿ. Parliamentary Affairs Minister, you kindly look at the reply given by the Government. ``whether any licence has been issued for extracting white shells from Aganashini river?" The reply is : ``Permission has not been given by the Enviornment Department. A few are harvesting shells with permission from Mining Department". I think both the Departments come under the jurisdiction' of the Government of Karnataka. They are not two different Governments. After all, the intention fo the Hon'ble Member in putting the question is whether such a thing could take place, which is harmful to the enviornment there. The Minister for Enviornment is right in saying that his Department has not given but it is the collective responsibility. You please guide us.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸಧೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ಎರಡು ಇಲಾಖೆಗಳಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ I only request the Hon'ble Speaker to withhold this question. We will give the answer.

ಡಾ: ಎಂ.ಪಿ. ಕರ್ಕಿ : ಅವರು ಉತ್ತರದಲ್ಲಿ ಏನು ಹೇಳುತ್ತಾರೆಂದರೆ ಪರಿಸರ ಇಲಾಖೆ ಅನುಮತಿಯನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ. ಪರಿಸರ ಇಲಾಖೆ ಅನುಮತಿ ಕೇಳದೇ ಗಣಿ ಇಲಾಖೆ ಅನುಮತಿಯನ್ನು ಕೊಡುವುದಕ್ಕೆ ಆಗುವುದಿಲ್ಲ. This is the system prevailing in the Government. ಆದುದರಿಂದ ಏಕೆ ಚಿಪ್ಪು ತೆಗೆಯುವುದಕ್ಕೆ ಅನುಮತಿಯನ್ನು ಕೊಟ್ಟಿರಿ ಎಂದು ನಾನು ಸರ್ಕಾರಕ್ಕೆ ಕೇಳುತ್ತೇನೆ. ಏಕೆಂದರೆ ಈ ರೀತಿಯ ವ್ಯವಹಾರ ಸರ್ಕಾರದಲ್ಲಿ ನಡೆಯುತ್ತಿದೆಯೇ ಎಂದು ನಾನು ಕೇಳುತ್ತಿದ್ದೇನೆ. ಇದು ಎರಡು ಡಿಪಾರ್ಟ್‌ಮೆಂಟ್‌ಗೆ ಸೇರಿದ ಪ್ರಶ್ನೆಯಲ್ಲ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಪರಿಸರ ಇಲಾಖೆಯಿಂದ ಇದಕ್ಕೆ ಅನುಮತಿಯನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಸಧ್ಯಕ್ಕೆ ಗಣಿಗಾರಿಕೆ ಇಲಾಖೆಯಿಂದ ಅನುಮತಿಯನ್ನು ಪಡೆದು ಚಿಪ್ಪು ತೆಗೆಯುತ್ತಿದ್ದು ಮತ್ತು ಈ ಸಂಬಂಧ ಪರಿಸರ ಇಲಾಖೆಯು ನೋಟೀಸನ್ನು ಕೊಟ್ಟಿರುವ ವಿಚಾರ ಬಂದಿದೆ. ಗಣಿಗಾರಿಕೆ ಇಲಾಖೆಯವರು ಯಾವ ರೀತಿ ಅನುಮತಿಯನ್ನು ಕೊಟ್ಟಿದ್ದಾರೆ ಎಂಬುದಕ್ಕೆ ಮಾಹಿತಿ ಇವೊತ್ತು ಬೇಕಾಗಿದೆ. ಮಾನ್ಯ ಸಭಾಧ್ಯಕ್ಷರು ಏನು ಹೇಳಿದ್ದಾರೆಂದರೆ ಪರಿಸರ ಇಲಾಖೆಯವರು ಅನುಮತಿ ಕೊಡದಿದ್ದರೂ ಕೂಡ ಅಲ್ಲಿ ಚಿಪ್ಪು ತೆಗೆಯುತ್ತಿರತಕ್ಕಂಥ ಕೆಲಸ ನಡೆಯುತ್ತಲೇ ಇದೆ ಎಂದು ಹೇಳಿದ್ದಾರೆ. ಈ ಕೆಲಸ ನಡೆಯುವುದಕ್ಕೆ ಗಣಿಗಾರಿಕೆ ಇಲಾಖೆಯವರು ಅನುಮತಿ ಕೊಟ್ಟಿದ್ದಾರೆ ಎನ್ನುವ ವಿಚಾರವಿದೆ. ಇವರು ಹೇಗೆ ಅನುಮತಿಯನ್ನು ಕೊಟ್ಟರು ಎಂಬುದಕ್ಕೆ ಸರ್ಕಾರದ ವತಿಯಿಂದ ಉತ್ತರ ಕೊಡಬೇಕಾಗಿದೆ. ಈ ಉತ್ತರವನ್ನು ಕಾನೂನಿನಡಿಯಲ್ಲಿಯೇ

ಕೊಡಬೇಕಾಗಿರುವುದರಿಂದ ಸಭಾಧ್ಯಕ್ಷರು ದಯವಿಟ್ಟು ಈ ಪ್ರಶ್ನೆಯನ್ನು ತಡೆಹಿಡಿಯಬೇಕು. ಏಕೆಂದರೆ ಗಣಿಗಾರಿಕೆ ಇಲಾಖೆ ಜೊತೆಯಲ್ಲಿ ಈ ಬಗ್ಗೆ ಸಂಪರ್ಕ ಮಾಡಿ ಸಮರ್ಪಕವಾದ ಉತ್ತರವನ್ನು ಜವಾಬ್ದಾರಿಯುತವಾಗಿ ಕೊಡಬೇಕಾಗುತ್ತದೆ. ಆ ಕೆಲಸವನ್ನು ನಾನು ಮಾಡುತ್ತೇನೆ.

ಡಾ|| ಎಂ.ಪಿ. ಕರ್ಕಿ : ಸಾಮಾನ್ಯವಾಗಿ ಗಣಿ ಇಲಾಖೆ ಪರಿಸರ ಇಲಾಖೆ ಪರ್ಮಿಷನ್ ಇಲ್ಲದೇ ಅನುಮತಿಯನ್ನು ಕೊಡುವುದಿಲ್ಲ. ಆದರೆ ಈ ಒಂದು ವಿಷಯದಲ್ಲಿ ಗಣಿಗಾರಿಕೆ ಇಲಾಖೆ ಹೇಗೆ ಅನುಮತಿ ಕೊಟ್ಟರು ಎಂಬುದು ಒಂದು ಪ್ರಶ್ನೆ. ಎರಡನೆಯದಾಗಿ ಅಲ್ಲಿ ಗಣಿಗಾರಿಕೆ ಈಗಲೂ ನಡೆಯುತ್ತಿದ್ದು ಚಿಪ್ಪನ್ನು ತೆಗೆಯುತ್ತಿದ್ದಾರೆ. ಈ ಬಗ್ಗೆ ಎನ್‌ಕ್ವೈರಿ ಆಗುವವರೆಗೆ ನಿಲ್ಲಿಸುತ್ತೀರಾ?

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದು ಇಷ್ಟೆ. ಸರ್ಕಾರದವರು ಸಮರ್ಪಕವಾಗಿ ಆಡಳಿತವನ್ನು ನಿರ್ವಹಣೆ ಮಾಡುವ ದೃಷ್ಟಿಯಿಂದ ಇಲಾಖೆಗಳನ್ನು ವಿಂಗಡಿಸಿಕೊಂಡು ಒಬ್ಬೊಬ್ಬರಿಗೆ ಒಂದೊಂದು ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಯಾವ ಇಲಾಖೆಯ ಮಂತ್ರಿಗಳಿಗೆ ತಾವು ಈ ಪ್ರಶ್ನೆಯನ್ನು ಕೇಳಿದ್ದಿರೋ ಆ ಸಚಿವರು ನೇರವಾಗಿ ಯಾವ ವಿಷಯವನ್ನು ಮುಚ್ಚಿಡದೇ ಇರುವ ಸತ್ಯಾಂಶವನ್ನು ಹೇಳಿದ್ದಾರೆ. ನಾನು ಸರ್ಕಾರಕ್ಕೆ ಏನು ಗಮನಕ್ಕೆ ತಂದೆ ಎಂದರೆ, ಸರ್ಕಾರ ಎಂದರೆ ಎಲ್ಲಾ ಇಲಾಖೆಗಳು ಸೇರಿ ಸರ್ಕಾರವಾಗಿದೆಯಾದ ಕಾರಣ ನೀವು ಹೀಗೆ ಪ್ರತ್ಯೇಕಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ನಾವು ಪರ್ಮಿಷನ್ ಕೊಡತಕ್ಕಂಥದ್ದು ಸರಿಹೋಗುವುದಿಲ್ಲ. ಆದುದರಿಂದ ಈಗ ಆಗಿರತಕ್ಕಂಥದ್ದನ್ನು ತಪ್ಪು ಎಂದು ಅವರು ಒಪ್ಪಿಕೊಂಡಿದ್ದಾರೆ. ಅಲ್ಲಿ ಮೈನಿಂಗ್‌ಗೆ ಪರ್ಮಿಷನ್‌ಕೊಟ್ಟಿಲ್ಲ, ಅಲ್ಲಿ ಆ ಕೆಲಸ ನಡೆಯುತ್ತಿಲ್ಲವೆಂದು ಅವರು ಹೇಳಿಲ್ಲ. ಅವರ ಇಲಾಖೆಯಿಂದ ಏನು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ಕೂಡ ಮಾಡಿ ನೋಟೀಸ್ ಕೊಟ್ಟಿದ್ದಾರೆ. ಆದುದರಿಂದ ಇದರಲ್ಲಿ ಸರ್ಕಾರದವರು ಜವಾಬ್ದಾರಿಯನ್ನು ತೆಗೆದುಕೊಂಡು ಮೈನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಯಾರು ಪರ್ಮಿಷನ್‌ಕೊಟ್ಟರು ಎಂಬ ಬಗ್ಗೆ ವಿಚಾರಣೆ ನಡೆಸಿ ಪೂರ್ಣ ಮಾಹಿತಿಯೊಂದಿಗೆ ತಮಗೆ ಉತ್ತರ ಕೊಡುತ್ತಾರೆ. ನಿಮ್ಮ ಮೂಲ ಉದ್ದೇಶವೆಂದರೆ ಈ ಚಿಪ್ಪು ತೆಗೆಯುವುದರಿಂದ ಅಲ್ಲಿಯ ಪರಿಸರಕ್ಕೆ ಹಾನಿಕಾರಕ ಎಂಬುದೇ ಆಗಿದೆ ಎಂದು ನನಗೆ ತಿಳಿದಿದೆ, ಆದುದರಿಂದ ಆ ಕೆಲಸ ನಡೆಯುವುದಕ್ಕೆ ಬಿಡಬಾರದು ಎಂಬುದು ನಿಮ್ಮ ಉದ್ದೇಶವಾಗಿದೆ. ಯಾವುದೇ ಒಂದು ಸಂಸ್ಥೆಯವರಿಗೆ ಅನುಮತಿ ಕೊಟ್ಟಿದ್ದಾರೆ, ಅವರು ಈ ಕೆಲಸವನ್ನು ಮಾಡುತ್ತಿದ್ದಾರೆ ಎಂದು ತಾವು ಸರ್ಕರದ ಗಮನಕ್ಕೆ ತಂದಿದ್ದೀರಿ. ಅವರು ಎರಡೂ ಇಲಾಖೆಯವರನ್ನು ಸಂಯೋಜಿಸಿ ಪೂರ್ಣ ಮಾಹಿತಿಯನ್ನು ಪಡೆದುಕೊಂಡು ನಿಮಗೆ ಉತ್ತರ ಹೇಳಲಿ. ಆಗ ನಿಮಗೆ ಅನುಕೂಲವಾಗುತ್ತದೆ.

ಡಾ: ಎಂ.ಪಿ. ಕರ್ಕಿ : ಆದರೆ ಈಗ ಅಲ್ಲಿ ಗಣಿಗಾರಿಕೆ ನಡೆದು ಚಿಪ್ಪು ತೆಗೆಯುತ್ತಿದ್ದಾರೆ. ಅದನ್ನು ತಕ್ಷಣ ನಿಲ್ಲಿಸುತ್ತಾರೆಯೇ?

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದ ವತಿಯಿಂದ ಉತ್ತರ ಕೊಟ್ಟಿದ್ದಾರೆ. ಗಣಿ ಇಲಾಖೆ ಮುಖಾಂತರ ಪರವಾನಗಿ ಕೊಟ್ಟಿದ್ದಾರೆ. ಪರಿಸರ ಇಲಾಖೆಯವರು ಈಗಾಗಲೇ

ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಬಹುಶಃ ಅಲ್ಲಿ ನಡೆಯುತ್ತಿರುವ ಕೆಲಸವನ್ನು ನಿಲ್ಲಿಸಬೇಕು ಎಂದು ಅವರು ಏನು ಹೇಳುತ್ತಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ನಾನು ತಮಗೆ ಏನು ಹೇಳುತ್ತೇನೆಂದರೆ ಇನ್ನೆರಡು ದಿವಸದಲ್ಲಿ ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡುವುದಕ್ಕೆ ನಾನು ಗಣಿ ಇಲಾಖೆಯ ವರೊಂದಿಗೆ ಯಾವ ಕಾರಣಕೋಸ್ಕರ ಅನುಮತಿಯನ್ನು ಕೊಟ್ಟರು ಎಂಬ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇದರ ನಂತರ ಸರ್ಕಾರದ ಮತಿಯಿಂದ ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡುತ್ತೇನೆ. ಆದುದರಿಂದ 2 ದಿವಸಗಳ ಕಾಲ ಅವಕಾಶ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಪರಿಸರ ಇಲಾಖೆಯವರು ನೋಟೀಸ್ ಕೊಟ್ಟಿದ್ದಾರೆ. ಅಂದರೆ ಇದರ ಅರ್ಥ ಕಾನೂನು ಬಾಹಿರವಾಗಿ ಅಲ್ಲಿ ಇಲಾಖೆಯ ಅನುಮತಿಯಿಲ್ಲದೇ ಚಿಪ್ಪು ತೆಗೆಯುತ್ತಿದ್ದಾರೆ. ಆ ರೀತಿ ಕೆಲಸ ನಡೆಯುತ್ತಿರುವುದರಿಂದ ತಕ್ಷಣ ಅದನ್ನು ನಿಲ್ಲಿಸಲಿ. ತದನಂತರ ಉತ್ತರ ಕೊಡಲಿ. ಕಾನೂನು ಬಾಹಿರವಾಗಿ ಅವರು ಮಾಡಿದ್ದರೆ ಅದು ಬೇರೆ ಚರ್ಚೆ. ಈಗಾಗಲೇ ನೋಟೀಸ್ ಕೊಟ್ಟಿರುವುದರಿಂದ ಇದನ್ನು ತಕ್ಷಣ ನಿಲ್ಲಿಸಬೇಕು. ಇದಕ್ಕೆ ಏನು ತೊಂದರೆ ಇದೆ ಸರ್ಕಾರದವರಿಗೆ? ಈಗಲೇ ನಿಲ್ಲಿಸಿದರೆ ಇನ್ನು ಮೂರ್ನಾಲ್ಕು ದಿವಸ ಲೂಟಿ ಆಗುವುದನ್ನು ತಪ್ಪಿಸಿದಂತೆ ಆಗುತ್ತದೆ.

11.30 ಪಿ.ಎಂ.

ಡಾ|| ಎಂ.ಪಿ. ಕರ್ಕಿ : ಪರವಾನಗಿಯಿಲ್ಲದಿದ್ದರೆ, 2 ದಿವಸ ಏಕೆ ಅವಕಾಶ ಕೊಡಬೇಕು? Let it be stopped forthwith.

ಅಧ್ಯಕ್ಷರು : ಸರ್ಕಾರ ಏನು ಹೇಳುತ್ತದೆಯೋ ಕೇಳೋಣ. Let me know what the Government says.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ : ಅಧ್ಯಕ್ಷರೇ, 1986ನೇ ಇಸವಿಯಲ್ಲಿ ಕೆಲವೊಂದು ಸಮುದ್ರ ತೀರದ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರವು 4 ವಲಯಗಳನ್ನು ಮಾಡಿದೆ. ಆ 4 ವಲಯಗಳ ಪೈಕಿ 3 ವಲಯಗಳು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿರುತ್ತವೆ. ಅವುಗಳ ಬಗ್ಗೆ 1991ರಲ್ಲಿ ಕೇಂದ್ರ ಸರ್ಕಾರವು ಅಧಿಕೃತ ಪ್ರಕಟಣೆಗಳನ್ನು ಹೊರಡಿಸಿತ್ತು. ಅದರಲ್ಲಿ ಕೆಲವೊಂದು ಸಮುದ್ರ ತೀರ ಪ್ರದೇಶಗಳಲ್ಲಿ, 3 ವಲಯಗಳಲ್ಲಿ 9ರ ಕೆಳಗೆ, ಉಸುಕನ್ನು ತೆಗೆಯುವಾದಾಗಲಿ, ಸಮುದ್ರ ತೀರ ಪ್ರದೇಶದಲ್ಲಿ ಸಿಕ್ಕತಕ್ಕಂತಹ ಖನಿಜಗಳನ್ನು ತೆಗೆಯಬಾರದೆಂದು ಈಗಾಗಲೇ ನಿಷೇಧ ಮಾಡಿದೆ. ಕಪ್ಪೆ ಚಿಪ್ಪು ಏನಿದೆ ಇದು ವಿಶೇಷ ಖನಿಜ. ಇದು ಸಮುದ್ರ ತೀರವನ್ನು ಬಿಟ್ಟು ಬೇರೆ ಯಾವ ಕಡೆಯೂ ಸಿಗುವುದಿಲ್ಲ.

ಅಧ್ಯಕ್ಷರು : ಈಗ ತೆಗೆಯುತ್ತಿದ್ದಾರಲ್ಲಾ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ : ಅಂಥ ಖನಿಜವನ್ನು ತೆಗೆಯುವುದಕ್ಕೆ ಕೇಂದ್ರ ಪರಿಸರ ಇಲಾಖೆಯವರು ಪರ್ಮಿಷನ್ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ಆ ಇಲಾಖೆಯವರೇ ನೋಟೀಸ್ ಕೊಟ್ಟಿದ್ದಾರೆ. ಕೇಂದ್ರದವರು ಅನುಮತಿ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಇವರು ಸ್ಪಡಿ ಮಾಡಿಕೊಂಡು ಬರುವುದಿಲ್ಲ. ಅಲ್ಲಿ ಹೋಗಿ ನೋಡಿಕೊಂಡು ಬರುವುದಿಲ್ಲ. ಈ ರೀತಿ ಆದರೆ ನಮಗೆ ಕಷ್ಟವಾಗುತ್ತದೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ : ಕೇಂದ್ರ ಪರಿಸರ ಇಲಾಖೆಯವರೇ ಕೊಟ್ಟಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ನಾವು ಸರ್ಕಾರದ ವತಿಯಿಂದ ಒಂದು ವಿಚಾರವನ್ನು ತಮ್ಮ ಮುಖಾಂತರ ನಿವೇದಿಸಿಕೊಳ್ಳುತ್ತಿದ್ದೇವೆ. ಇದು 2 ಇಲಾಖೆಗಳಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರವಾಗಿರುವುದರಿಂದ, ಇದನ್ನು ಗಣಿ ಇಲಾಖೆಯ ಜೊತೆಯಲ್ಲಿ ಸಮಗ್ರವಾಗಿ ಚರ್ಚೆ ಮಾಡಿ ಮಾನ್ಯ ಸದಸ್ಯರ ಪ್ರಶ್ನೆಗೆ ಸಮರ್ಪಕವಾಗಿರತಕ್ಕಂಥ ಉತ್ತರವನ್ನು ಸರ್ಕಾರದ ವತಿಯಿಂದ ಕೊಡಬೇಕು. ತಾವು ಆ ಉತ್ತರವನ್ನು ಪಡೆಯಬೇಕು. ತಾವು ದಯವಿಟ್ಟು 2 ದಿವಸ ಸಮಯ ಕೊಡಿ. ನಾವು ಉತ್ತರ ಕೊಡುತ್ತೇವೆ. ತಾವು ಸಮಯವನ್ನು ಕೊಡಬೇಕೆಂದು ಸರ್ಕಾರದ ವತಿಯಿಂದ ಕೇಳಿದರೂ ಕೂಡ ನೀವು ಈ ರೀತಿ ಇದನ್ನು ಪ್ರಸ್ತಾಪ ಮಾಡುತ್ತಾ ಹೋದರೆ ನಾವು ಏನು ಉತ್ತರ ಕೊಡಬೇಕು?

ಡಾ|| ಎಂ.ಪಿ. ಕರ್ಕಿ : ನೀವು ಉತ್ತರ ಕೊಡಿ.

ಶ್ರೀ ಎಂ.ಸಿ. ನಾಣಯ್ಯ : ಉತ್ತರ ಕೊಡುತ್ತೇನೆ. ನಾನು ನಿಮ್ಮ ಪ್ರಶ್ನೆಗೆ ಉತ್ತರ ಕೊಡುತ್ತೇನೆ. ಇದು 2 ಇಲಾಖೆಗಳಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ. ಸರ್ಕಾರ ದವರು ಕೆಲವು ಭಾಗಗಳಲ್ಲಿ ಇಂಥ ಒಂದು ಕೆಲಸ ಮಾಡಲಿಕ್ಕೆ ಕಾನೂನಿನಡಿಯಲ್ಲಿ ಅನುಮತಿಯಿದೆ ಎನ್ನತಕ್ಕಂಥ ವಿಚಾರವನ್ನು ಗಣಿ ಇಲಾಖೆಯವರು ಹೇಳುತ್ತಿದ್ದಾರೆ. ಇದರ ಬಗ್ಗೆ ಸಮರ್ಪಕವಾಗಿರತಕ್ಕಂಥ ಉತ್ತರವನ್ನು ಈ ಸದನದಲ್ಲಿ ಮಂಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮದು ಹಠ ಏನೂ ಇಲ್ಲ. ಪಾರ್ಲಿಮೆಂಟರಿ ಸಚಿವರ ಗಮನಕ್ಕೆ ತರುವಂಥಾದ್ದು ಏನೆಂದರೆ, ಆ ವ್ಯಕ್ತಿ ಈಗಾಗಲೇ ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಇಲಾಖೆಯವರು ನೋಟೀಸ್ ಕೊಟ್ಟಿದ್ದಾರೆ. ಅನುಮತಿಯಿಲ್ಲದೇ ಅವನು ಆ ಕೆಲಸ ಮಾಡಲಿಕ್ಕೆ ತೊಡಗಿದ್ದಾನೆ. ಇದು ಸ್ಪಷ್ಟವಾಯಿತು. ನೋಟೀಸ್ ಕೊಟ್ಟಿದ್ದಾರೆ. ಎಂದರೆ ಅದರ ಅರ್ಥವೇ ಇದು. ಇಲ್ಲದಿದ್ದರೆ, ಪರ್ಮಿಷನ್ ತೆಗೆದುಕೊಂಡಿದ್ದರೆ, ನೋಟೀಸ್ ಕೊಡತಕ್ಕ ಪ್ರಶ್ನೆಯೇ ಬರುತ್ತಿರಲಿಲ್ಲ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. ಇವತ್ತು, ನಾಳೆ 2 ದಿವಸ ಬಿಡೋಣ. ನಾಡಿದ್ದು I will take up this matter as an additional question. ಅವತ್ತಿಗೆ ಅವರ ಇಲಾಖೆಯವರು ಇಲ್ಲದಿದ್ದರೆ, I will post this particular question for day after tomorrow as an additional question. Let the Government examine all the aspects. Let the Government come forward with a clear reply by day after tomorrow. ಇವತ್ತು ನಾಳೆ ಅವರು ತೆಗೆದರೆ ಏನೂ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಲ್ಲಿ ನನ್ನದೊಂದು ಪ್ರಾರ್ಥನೆ. ಆ ಕಡೆ ಕುಳಿತಿರುವವರಾಗಲೀ, ಈ ಕಡೆ ಕುಳಿತಿರುವವರಾಗಲೀ ರಾಜ್ಯದ ಹಿತವನ್ನು ಕಾಪಾಡಬೇಕೆಂಬ ಉದ್ದೇಶದಿಂದ ಕುಳಿತಿದ್ದೇವೆ. ಇಷ್ಟು ಹುಡುಕಿ ಒಂದು ಪ್ರಶ್ನೆಯನ್ನು ಕೇಳಿ ಸರ್ಕಾರದ ಬೊಕ್ಕಸಕ್ಕೆ ಬರುತ್ತಿರುವಂತಹ ಹಣ ಲೂಟಿಯಾಗಬಾರದು, ಖಾಸಗಿ ಸಂಪತ್ತು ಲೂಟಿಯಾಗಬಾರದೆಂದು ಪ್ರಶ್ನೆ ಕೇಳಿದಾಗ, ಅವರು ನೋಟೀಸ್ ಕೊಟ್ಟಿದ್ದಾರೆಂದರೆ ಅದರ ಅರ್ಥವೇ ಅಲ್ಲಿ ಕಾನೂನು ಬಾಹಿರ ವ್ಯವಹಾರ ನಡೆಯುತ್ತಿದೆ ಎಂದು. ನೀವು 3 ದಿನ ಅಲ್ಲದಿದ್ದರೆ, 4 ದಿನ ಟೈಂ ತೆಗೆದಕೊಳ್ಳಿ. ಇದನ್ನು ಇವತ್ತು ತಕ್ಷಣವೇ ಸ್ಟೇ ಮಾಡಿ. ಇದು ಆಗಲಿಲ್ಲವೆಂದರೆ, ನೀವು ತಪ್ಪು ತಿಳಿದುಕೊಳ್ಳದೇ ಹೋದರೆ ನಾವು ಹೇಳಬೇಕಾಗುತ್ತದೆ. ನಿಮಗೆ ಜನರ ಹಿತಕ್ಕಿಂತ ಆ ಕಲ್ಲು ಲೂಟಿ ಮಾಡುವವರ ಹಿತವೇ ಮುಖ್ಯವೆಂದು ಈ ಸರ್ಕಾರದ ಬಗ್ಗೆ ಜನ ಭಾವಿಸಬಾರದು. ಆ ತೀರ್ಮಾನಕ್ಕೆ ನಾವು ಬರಬಾರದು ಅಷ್ಟೇ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರದ ವತಿಯಿಂದ ಒಂದು ಉತ್ತರವನ್ನು ನಾವು ಸಮರ್ಪಕವಾಗಿ ಕೊಡುತ್ತೇವೆಂದು ಹೇಳಿಯಾದ ಮೇಲೂ ಕೂಡ, ಈಗಲೇ ನಿಲ್ಲಿಸಿ ಎಂದು ಇವರು ಹೇಳುವುದಾದರೆ, ನಾವು ಸರ್ಕಾರದ ವತಿಯಿಂದ ಆ ರೀತಿಯ ಆಶ್ವಾಸನೆಯನ್ನು ಕೊಡುವುದಕ್ಕಾಗುವುದಿಲ್ಲ. ಅವರು ಮಾಡುತ್ತಿರತಕ್ಕಂಥ ಕೆಲಸ ಕಾನೂನು ರೀತಿ ಸರಿಯಾಗಿದೆಯೇ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ, 2 ದಿವಸ ಸಮಯ ಕೊಡಿ ಎಂದು ನಾನು ಹೇಳುತ್ತಿದ್ದೇನೆ. 2 ದಿನಗಳಾದ ಮೇಲೆ ಇದಕ್ಕೆ ಸರ್ಕಾರದ ವತಿಯಿಂದ ಸಮರ್ಪಕವಾಗಿರತ್ಕಕಂಥ ಉತ್ತರವನ್ನು ಕೊಡುತ್ತೇವೆ.

ಡಾ|| ಎಂ.ಪಿ. ಕರ್ಕಿ : ಉತ್ತರ ಕೊಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. 2 - 4 ದಿವಸ ತೆಗೆದುಕೊಳ್ಳಲಿ. ಆದರೆ, ಅದು ಸರಿಯಾಗಿದೆಯೆಂದು ಹೇಳಿದರು. ಒಂದು ವೇಳೆ, ಸರಿಯಾಗಿಲ್ಲದಿದ್ದರೆ ಏನು ಮಾಡುವುದು? 2 ದಿವಸ ಚಿಪ್ಪು ತೆಗೆಯುವುದಕ್ಕೆ ಯಾರು ಜವಾಬ್ದಾರರಾಗುತ್ತಾರೆ? ತಪ್ಪಾಗಿ ತೆಗೆಯುತ್ತಿದ್ದಾರೆಂದು ಹೇಳಿದರೆ, ಅದಕ್ಕೆ ಯಾರು ಜವಾಬ್ದಾರರು ?2 ದಿವಸ ,4 ದಿವಸಗಳಾಗಲೀ ತಪ್ಪು ಎಂದು ಅನ್ನಿಸಿದಾಗ, ಅದನ್ನು ತಕ್ಷಣ ಏಕೆ ನಿಲ್ಲಿಸಬಾರದು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಯ ಕಳಕಳಿ ಎಲ್ಲರಿಗೂ ಮನವರಿಕೆಯಾಗಿದೆ. ಇದು ನಾವು ಅಂದುಕೊಂಡಂತೆ ಮೇಲ್ನೋಟಕ್ಕೆ ಹೇಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರ ಪ್ರಾದೇಶಿಕ ವಲಯಗಳನ್ನು ವಿಭಾಗ ಮಾಡಿ 4 ಪ್ರಾದೇಶಿಕ ವಲಯಗಳ ಪೈಕಿ ಒಂದು ಪ್ರಾದೇಶಿಕ ವಲಯದಲ್ಲಿ ಕಾನೂನು ಪ್ರಕಾರ ಪರವಾನಗಿ ಕೊಡತಕ್ಕಂಥಾದ್ದು ಇಟ್ಟುಕೊಂಡಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆ ಕಾರಣಕ್ಕಾಗಿ ಸಮಜಾಯಿಷಿ ನೋಟೀಸ್ ಕೊಟ್ಟ ಮಾತ್ರಕ್ಕೆ ಅದು ಎಷ್ಟರ ಮಟ್ಟಿಗೆ ಕಾನೂನು ಬಾಹಿರವಾದಂಥ ಚಟುವಟಿಕೆಗಳು ಎಂದು ನಾವು ಹೇಳುವುದಕ್ಕಾಗುವುದಿಲ್ಲ ಮತ್ತು ನಾವು ನೋಟೀಸ್‌ಕೊಟ್ಟ ಮಾತ್ರಕ್ಕೆ ಅವರು ತಪ್ಪಿತಸ್ಥರೆಂದೂ ಹೇಳುವುದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ, ನೀವು ನೋಟೀಸ್ ಯಾವಾಗ ಕೊಟ್ಟಿರಿ? ಇವತ್ತಿನವರೆಗೂ ಏಕೆ ಸುಮ್ಮನಿದ್ದೀರಿ? ಇದರಲ್ಲ ಏನಾದರೂ ಅಂಡರ್‌ಸ್ಟ್ಯಾಂಡಿಂಗ್ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ಈಗ ನಡೆಸತಕ್ಕಂಥ ಕಾರ್ಯಗಳ ಬಗ್ಗೆ ನೀವು ಸಮಜಾಯಿಷಿಯನ್ನು ಕೊಡಬೇಕು ಎನ್ನುವ ಪ್ರಶ್ನೆ ಬಂದ ತಕ್ಷಣವೇ ಅವರಿಂದ ಉತ್ತರವನ್ನು ತರಿಸಿಕೊಳ್ಳುತ್ತೇವೆ. 2 ದಿವಸಗಳೊಳಗಾಗಿ ಖಂಡಿತವಾಗಿಯೂ ನಾವು ಉತ್ತರ ಕೊಡುವುದರ ಜೊತೆಗೆ ಕಾನೂನು ಬಾಹಿರವಾದಂಥ ಚಟುವಟಿಕೆ ನಡೆದಿದ್ದರೆ, ಅದನ್ನು ನಿಲ್ಲಿಸುತ್ತೇನೆ. ಆದ್ದರಿಂದ ದಯಮಾಡಿ ತಮ್ಮ ಮೂಲಕ ವಿನಂತಿ ಮಾಡುತ್ತೇನೆ....

ಅಧ್ಯಕ್ಷರು : ಡಾ|| ಕರ್ಕಿಯವರೆ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡುತ್ತೇನೆ. ತಾವು ಎತ್ತಿದ ಮಹತ್ವದ ಪ್ರಶ್ನೆಗೆ ಸಂಬಂಧಪಟ್ಟಂತೆ ಸರ್ಕಾರ ನಾಳೆ, ನಾಡಿದ್ದರೊಳಗೆ ಇದನ್ನು ನಿಲ್ಲಿಸಬೇಕೆಂದು ತೀರ್ಮಾನ ತೆಗೆದುಕೊಂಡರೆ, ಈ 2 ದಿವಸಗಳ ಅವಧಿಯೊಳಗೆ ತೆಗೆದಿರತಕ್ಕಂಥದ್ದಕ್ಕೆ ಯಾರು ಹೊಣೆ ಎನ್ನುವ ಪ್ರಶ್ನೆಯನ್ನೂ ಒಳಗೊಂಡಂತೆ ನಾವು ನಾಡಿದ್ದು ಚರ್ಚೆ ಮಾಡೋಣ. ಮುಂದಿನ ಪ್ರಶ್ನೆ ತೆಗೆದುಕೊಳ್ಳೋಣ. ದಯವಿಟ್ಟು ಸಹಕರಿಸಿ.

ಸಕಲೇಶಪುರ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವುದು.

144 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಆರೋಗ್ಯ ಮತ್ತು ಕುಕು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸಕಲೇಶಪುರದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ನಿರ್ಧಾರ ತೆಗೆದುಕೊಂಡಿದೆಯೇ?*

2) *ಹಾಗಿದ್ದಲ್ಲಿ ಎಷ್ಟು ಹಾಸಿಗೆಗೆ ಹೆಚ್ಚಿಸಲಾಗುತ್ತಿದೆ?*

3) *ಯಾವಾಗ ಈ ಕಾರ್ಯ ಪ್ರಾರಂಭ ಮಾಡಲಾಗುವುದು?*

4) *ಈ ಆಸ್ಪತ್ರೆಯಲ್ಲಿ ಸರಿಯಾದ ನೀರಿನ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

5) *ಬರದಿದ್ದಲ್ಲಿ ನಿವಾರಿಸಲು ತೆಗೆದುಕೊಳ್ಳುವ ಕ್ರಮಗಳೇನು?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಸರ್ಕಾರದ ಪರಿಶೀಲನೆಯಲ್ಲಿದೆ.

2) 133 ಹಾಸಿಗೆಗಳಿಂದ 150 ಹಾಸಿಗೆಗಳಿಗೆ.

3) ವಿಶ್ವಬ್ಯಾಂಕ್ ಆರ್ಥಿಕ ನೆರವಿನ ಕರ್ನಾಟಕ ಆರೋಗ್ಯ ಅಭಿವೃದ್ಧಿ ಯೋಜನೆಯಡಿಯ ಕಾರ್ಯಕ್ರಮ 4ನೇ ಹಂತದಲ್ಲಿ.